## ಕೀರ್ತನೆಯ ಹಿನ್ನೆಲೆ

# ಮುಯ್ಯಕ್ಕೆ ಮುಯ್ಯಿ ತೀರಿತು

ಒಮ್ಮೆ ಪುರಂದರ ದಾಸರು ರಾತ್ರಿ ತಡವಾಗಿ ಮನೆಗೆ ಮರಳುವ ಹೊತ್ತಿಗೆ, ಅವರಿಗೆ ಕೈಕಾಲು ತೊಳೆಯಲು ನೀರುಕೊಡುತ್ತಿದ್ದ ಅಪ್ಪಣ್ಣನೆಂಬ ಶಿಷ್ಯ ನಿದ್ದೆಹೋಗಿಬಿಟ್ಟಿದ್ದ. ಅದಕ್ಕೆಂದೇ, ಸಾಕ್ಷಾತ್ ವಿಠಲನೇ, ಅಪ್ಪಣ್ಣನ ರೂಪ ಧರಿಸಿ ನೀರು ತಂದು ಕೊಟ್ಟನಂತೆ. ಆ ನೀರು ಹೆಚ್ಚು ಬಿಸಿಯಾಗಿದ್ದರಿಂದ, ಪುರಂದರ ದಾಸರಿಗೆ ಕೋಪಬಂದು ಆ ಪಾತ್ರೆಯಲ್ಲೇ ಅಪ್ಪಣ್ಣನಿಗೆ ಹೊಡೆದುಬಿಟ್ಟರಂತೆ. ಮರುದಿನ ಎದ್ದನಂತರ ಅಪ್ಪಣ್ಣನಲ್ಲಿ ತನ್ನ ಕೋಪಕ್ಕೆ ಕ್ಷಮಿಸೆಂದು ಕೇಳಲು ನೋಡಿದರೆ, ಅವನಿಗೇನೂ ಆಗೇ ಇಲ್ಲ! ರಾತ್ರಿ ತಾನು ನೀರು ಕೊಡಲೇ ಇಲ್ಲವೆಂದು ಅಪ್ಪಣ್ಣ ಹೇಳಿದಾಗ, ದಾಸರಿಗೆ ಇದು ಪಂಢರೀರಾಯ ವಿಠಲನದ್ದೇ ಕೆಲಸವೆಂದು ತೋರಿತು. ಅದೇ ಕ್ಷಣ ದೇವಾಲಯಕ್ಕೆ ಹೋಗಿ ನೋಡಿದರೆ, ಮೂರ್ತಿಯ ಹಣೆಯಲ್ಲಿ ಗುಬುಟೊಂದು ಇತ್ತಂತೆ! ತಮ್ಮ ತಪ್ಪನ್ನು ಮನ್ನಿಸಬೇಕೆಂದು ದಾಸರು ಕ್ಷಮೆ ಕೋರಿದರು.

ಆ ರಾತ್ರಿ ವಿಠಲನು ಪುರಂದರ ದಾಸರ ವೇಷತಾಳಿ ಊರಿನ ವೇಶ್ಯೆಯೊಬ್ಬಳ ಮನೆಗೆ ಹೋದನಂತೆ. ಅವಳ ನರ್ತನವನ್ನು ಮೆಚ್ಚಿ ಕೈಯಲ್ಲಿದ್ದ ಕಂಕಣವನ್ನು ಬಿಚ್ಚಿ ಆಕೆಗೆ ಕೊಟ್ಟುಬಿಟ್ಟನಂತೆ. ಮರುದಿನ ಅರ್ಚಕರು ಗರ್ಭಗುಡಿಯನ್ನು ತೆರೆದು ನೋಡಿದರೆ, ಪಾಂಡುರಂಗನ ಕೈಯ ಚಿನ್ನದ ಕಂಕಣವೇ ಇರಲಿಲ್ಲ. ಅದೇ ಸಮಯಕ್ಕೆ ಅಲ್ಲಿ ದೇವರ ದರ್ಶನಕ್ಕೆ ಬಂದ ಆ ನರ್ತಕಿಯ ಕೈಯಲ್ಲಿತ್ತು ಆ ಚಿನ್ನದ ಕಡಗ! ಅವಳನ್ನು ವಿಚಾರಿಸಲಾಗಿ ಪುರಂದರ ದಾಸರು ತನ್ನ ಮನೆಗೆ ಬಂದದ್ದನ್ನೂ, ತನಗೆ ಬಳುವಳಿಯಾಗಿ ಆ ಕಡಗವನ್ನು ಕೊಟ್ಟಿದ್ದನ್ನೂ ಅವಳು ಹೇಳಿದಳು.

ಇದನ್ನು ಕೇಳಿದ ದೇವಾಲಯದ ಅಧಿಕಾರಿಗಳು ದಾಸರನ್ನು ಕರೆತರಿಸಿ, ಕಂಬಕ್ಕೆ ಕಟ್ಟಿ ಚಾವಟಿಯೇಟು ಕೊಡಿಸಿದರಂತೆ. ಆ ಸಮಯದಲ್ಲಿ ಪುರಂದರ ದಾಸರು ಬಾಯಲ್ಲಿ ಹೊರಟ ಹಾಡಿದು ಎನ್ನುವುದು ಪರಂಪರೆಯಿಂದ ಬಂದ ನಂಬಿಕೆ.

ನೀನು ಹೀಗೆ ಮುಯ್ಯಗೆ ಮುಯ್ಯ ತೀರಿಸಿಕೊಂಡೆಯೇನು? ನಿನಗೆ ಭಕ್ತ ವತ್ಸಲನೆಂಬ ಬಿರುದು ಗಳಿಸಬೇಕಾಗಿದ್ದರೆ, ನೀನು ಈ ಲೋಕದಲ್ಲಿ ನಮಗೆ ಕೊಟ್ಟಿರುವ ಹುಟ್ಟು ಎಂಬ ಬಂಧನದ ಕಂಕಣವನ್ನು ಕಿತ್ತು ಎಸೆಯೋ ಎಂದು ವಿಠಲನಿಗೇ ಸವಾಲು ಹಾಕಿದಂತಹ ಮಹಾತ್ಮರು ನಮ್ಮ ಪುರಂದರ ದಾಸರು!

*********